ಮೈಸೂರು ರೆವಿನ್ಯೂ ಸರ್ವೇ ಮತ್ತು ಸೆಟಿಲ್‌ಮೆಂಟ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. 40. ತಾರೀಖು 25ನೇ ಏಪ್ರೆಲ್ ಸ್ರ 1889.

ಇದರಿಂದ ಸಮಸ್ತ ಜನರಿಗೂ ತಿಳಿಯುವರಕ್ಕೋಸ್ಕರ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಕೀರದ ಶ್ರೀರಂಗಪಟ್ಣ ತಾಲ್ಲೂಕಿನ ಸರ್ವೇ ಜಮಾಬಂದಿಯು ಖರುವ ತಿಂಗಳು ಗುರ್ಯೇ ತಾರೀಖಿಗೆ, ಯೂ ಆ ಘುವಮೂರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂ॥ ಮೈಸೂರು ರೆವಿನ್ಯೂ ಸರ್ವೇ
ಮತ್ತು ಸೆಟಿಲ್‌ಮೆಂಟ್.

ಫಾರೆಸ್ಟ್ ಇಲಾಖಾ.

ತಾರೀಖು 3ನೇ ಏಪ್ರೆಲ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪಂಕಿಯಿಂದ ಸಂರಕ್ಷಿಸಲ್ಪಟ್ಟ ಮತ್ತು ಇದರ ಡಿ ನಮೂದಿಸಲ್ಪಡುವ ಅಮಾನಿ ಜಂಗಲ್‌ಗಳಲ್ಲಿ ಹೋಗತಕ್ಕಂಥಾ ರಸ್ತೆಗಳು ಮಾಮೂಲ್ ಅನುಸರಿಸಿ ಸ್ರ 1889ನೇ ಇಸವಿ ಮೇ 31ನೇ ತಾರೀಖಿನ ವರಿಗೆ ಬಂದ್ ಮಾಡಲ್ಪಟ್ಟಿರುತ್ತವೆ.

1. ವೈನಾಡ್ ಜಂಗಲಿನಿಂದ ಪೇಗೂರ್ ಫಾರೆಸ್ಟಿನಲ್ಲಿರುವ ಗುಂಡ್ಲಿಗೆ ಹೋಗತಕ್ಕ ರಸ್ತೆ.
2. ವೈನಾಡ ಫಾರೆಸ್ಟಿನಿಂದ ಐನೂರು ಮೂರ್‌ಗುಡೀ ಫಾರೆಸ್ಟ್ ಮಾರ್ಗವಾಗಿ ಹೋಗತಕ್ಕ ರಸ್ತೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಆ॥ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್,

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 415.

ಬೆಂಗಳೂರು ದೊಡ್ಡಪೇಟೇಲಿದ್ದ ಮೃತಪಟ್ಟ ಗವುಡರ ಚೆನ್ನಬಸಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ವೀರಭದ್ರಪ್ಪ, ಮೃತಪಟ್ಟ ಸದರೀ ಚೆನ್ನಬಸಂಣನವರಿಗೆ ಅಂಣನ ಮಗ ಆಗಬೇಕೆಂಬ ಹಕ್ಕುದಾರೀಮೇಲೆ ಬೆಂಗಳೂರು ಸ್ಥಳದ ವೀರಭದ್ರಪ್ಪನು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಗವುಡರ ಚನ್ನಬಸಂಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೇಡಿ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಭದ್ರಪ್ಪನ ಅರ್ಜಿಯನ್ನು 1889ನೇ ಇಸವಿ ಜೂ ತಿಂಗಳು ತಾರೀಖು 28ರಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಬಸಂಣನವರ ಆಸ್ತಿಗೆ, ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1889ನೇ ಇಸವಿ ಏಪ್ರೆಲ್ 17ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ್ ಜಡ್ಜ.